ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆಗಳು. ಈಗ ಶ್ರೀ ಕೆ. ಕುಶಾಲ ಅವರು ಸಭೆಯಲ್ಲಿ ಹಾಜರಿಲ್ಲ. ಆದ್ದರಿಂದ ಮುಂದಿನ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಲಿಯವರು ನೀತಿ ನಿಯಮಗಳನ್ನು ಉಲ್ಲಂಘಿಸಿ ಖಾಸಗಿಯವರಿಂದ ನಾಯಿಲ್ ರೇಷ್ಮೆ ದಾರವನ್ನು ಖರೀದಿಸುವ ಬಗ್ಗೆ ನಾನು ರೇಷ್ಮೆ ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಇಲಾಖೆಗಳ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಸಚಿವರು).—ನೀತಿ ನಿಯಮಗಳನ್ನು ಕಡೆಗಣಿಸಿ ಕರ್ನಾಟಕ ರೇಷ್ಮೆ ಮಾರಾಟ ಮಂಡಲಿ (ಕೆ.ಎಸ್.ಎಂ.ಬಿ.)ಯೂ ಯಾವ ಸರಕನ್ನೂ ಖರೀದಿಸಿಲ್ಲ. ಖಾಸಗಿಯವರಿಂದ ಎಂದರೆ ಸ್ಪನ್ ಸಿಲ್ಕ್ ಇಂಡಿಯಾರವರಿಂದ ಬಟ್ಟೆ ತಯಾರು ಮಾಡಲು ಮತ್ತು ಪೂರಲು ೧೦ (ಹತ್ತು) ಟನ್ ನಾಯಿಲ್ಸ್ ದಾರವನ್ನು ಮಾರ್ಚ್ ೧೯೮೫ರಿಂದ ಜುಲೈ ೧೯೮೫ ರವರೆಗೆ ಖರೀದಿಸಿರುವುದು ನಿಜ. ಇದರಲ್ಲಿ ಸುಮಾರು ೬೭೨ ಕೆ.ಜಿ. ಗಳಷ್ಟನ್ನು ಮಾರಲಾಗಿದೆ. ಇನ್ನುಳಿದ ಸರಕನ್ನು ಇದರ ಬೇಡಿಕೆ ಕಡಿಮೆಯಾಗಿರುವುದರಿಂದ ಇನ್ನೂ ಮಾರಲಾಗಿಲ್ಲ. ಬಟ್ಟೆ ತಯಾರು ಮಾಡುವುದನ್ನು ಕಾರ್ಯನೀತಿ ನಿರ್ಣಯದಿಂದ ನಿಲ್ಲಿಸುವುದರಿಂದ ನಾಯಿಲ್ಸ್ ದಾರವನ್ನು ಬಟ್ಟೆಯನ್ನು ತಯಾರು ಮಾಡಲು ಉಪಯೋಗಿಸಲಾಗುತ್ತಿಲ್ಲ. ದಾಸ್ತಾನಾದ ದಾರವನ್ನು ಇನ್ನೂ ಪೂರ್ಣವಾಗಿ ಮಾರಿಲ್ಲವಾದ್ದರಿಂದ ಈ ವ್ಯವಹಾರದಲ್ಲಿ ನಷ್ಟವಾಗಿದೆ ಎಂಬುದನ್ನು ಖಚಿತವಾಗಿ ಹೇಳಬರುವುದಿಲ್ಲ. ಪ್ರತಿ ವ್ಯವಹಾರದ ಆಧಾರದ ಮೇಲೆ ಲಾಭ ಅಥವಾ ನಷ್ಟವನ್ನು ನಿರ್ಣಯಿಸುವುದಕ್ಕೆ ಸಾಧ್ಯವಿಲ್ಲ. ಆದರೆ ವಾರ್ಷಿಕ ವ್ಯಾಪಾರದ ಮೊತ್ತದಿಂದ ನಿರ್ಧರಿಸಬಹುದು.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡಿನಲ್ಲಿ ೫೦೦ ಕೆ.ಜಿ. ಗಿಂತ ಹೆಚ್ಚು ರೇಷ್ಮೆಯನ್ನು ಕೊಂಡುಕೊಳ್ಳಬೇಕಾದರೆ ಅಲ್ಲಿನ ಆಡಳಿತವರ್ಗ ಸಭೆ ಸೇರಿ ಯಾವ ರೀತಿ ಖರೀದಿ ಮಾಡಬೇಕು ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ. ಆದರೆ ಈ ಒಂದು ವ್ಯವಹಾರದಲ್ಲಿ ಈ ನಿಯಮವನ್ನು ಗಾಳಿಗೆ ತೂರಿ ೧೦ ಟನ್ ನಾಯಿಲ್ಸ್ ದಾರವನ್ನು ಖರೀದಿ ಮಾಡಲು ಕಾರಣವೇನು ? ಈ ದಾರದ ಬೆಲೆ ಕೆ.ಜಿ. ಗೆ ೮೫ ರೂಪಾಯಿಗಳಿದ್ದರೂ ಸಹ ಇವರು ಖಾಸಗಿಯವರಿಂದ ಕೆ.ಜಿ. ಗೆ ೨೬೨ ರೂಪಾಯಿಗಳ ಪ್ರಕಾರ ಖರೀದಿ ಮಾಡಲು ಇದ್ದ ಕಾರಣವೇನು ? ಇಷ್ಟೊಂದು ಹೆಚ್ಚಿನ ಬೆಲೆ ಕೊಡಲು ಕಾರಣವೇನು ? ಇದಕ್ಕೆ ಸಂಬಂಧಪಟ್ಟಂತೆ ಅಲ್ಲಿನ ಫೈನಾನ್ಸ್ ಮೇನೇಜರ್ ಅವರು ಚೆಕ್‌ನ್ನು ಇಷ್ಯೂ ಮಾಡಿದ್ದಾರೆ. ಆದರೆ ಚೆಕ್ ಇಷ್ಯೂ ಮಾಡುವ ಅಧಿಕಾರ ಇವರಿಗಿಲ್ಲ. ಆದರೂ ಚೆಕ್ ಇಷ್ಯೂ ಮಾಡಲು ಕಾರಣವೇನು ? ಈ ಒಂದು ವ್ಯವಹಾರದಲ್ಲಿ ಹೆಚ್ಚಿನ ಬೆಲೆ ಕೊಟ್ಟಿರುವುದರಿಂದ ಮತ್ತು ಈ ಹಣಕ್ಕೆ ಆಗುವಂತಹ ಬಡ್ಡಿಯನ್ನು ಲೆಕ್ಕ ಹಾಕಿದಾಗ ಸುಮಾರು ೩೩ ಲಕ್ಷ ರೂಪಾಯಿಗಳಷ್ಟು ಹಣ ಈ ಮಂಡಳಿಗೆ ನಷ್ಟವಾಗಿದೆ. ಆದರೂ ಇಲ್ಲಿ ನಷ್ಟವಾಗಿಲ್ಲವೆಂದು ಹೇಳಲು ಕಾರಣವೇನು ? ಈ ರೀತಿ ಕೊಂಡ ದಾರ ಬಹಳ ಕಾಲದಿಂದ ಉಪಯೋಗಿಸದೆ ಇರುವುದರಿಂದ ಇದರ ಬಲ ಕೂಡ ಹೊರಟುಹೋಗಿದೆ. ಇದನ್ನು ಹೆಚ್ಚು ಕಾಲ ದಾಸ್ತಾನು ಮಾಡುವುದಕ್ಕೆ ಬರುವುದಿಲ್ಲ. ಈ ಒಂದು ವ್ಯವಹಾರದಲ್ಲಿ ನಿಮ್ಮ ಅಧಿಕಾರಿಗಳು ೯ ಲಕ್ಷ ರೂಪಾಯಿಗಳನ್ನು ಪಡೆದಿದ್ದಾರೆ. ಇದನ್ನು ನಾನು ರುಜುವಾತುಮಾಡುತ್ತೇನೆ, ಇಲ್ಲದಿದ್ದರೆ ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ಆದ್ದರಿಂದ ಇದರಲ್ಲಿ ದುರ್ವ್ಯವಹಾರ ನಡೆದಿದೆಯೇ ಅಥವಾ ಇಲ್ಲವೇ ಎಂಬುದನ್ನು ತನಿಖೆ ಮಾಡುವ ಸಲುವಾಗಿ ಈ ಸದನದ ಒಂದು ಸಮಿತಿಯನ್ನು ನೇಮಕ ಮಾಡಬೇಕು. ಇಲ್ಲಿ ದುರ್ವ್ಯವಹಾರ ನಡೆದಿಲ್ಲವೆಂದು ರುಜುವಾತಾದರೆ ನಾನು ಏನು ಶಿಕ್ಷೆ ಬೇಕಾದರೂ ಅನುಭವಿಸಲು ಸಿದ್ಧನಿದ್ದೇನೆ. ಹಳ್ಳಿಯ ಒಂದು ಸೊಸೈಟಿಯ ನೌಕರ ಅಕ್ರಮ ವ್ಯವಹಾರದಲ್ಲಿ ತೊಡಗಿದರೆ ಕೂಡಲೇ ಆತನನ್ನು ಅಪಾನತ್ತಿನಲ್ಲಿಡುತ್ತೀರಿ. ಆದರೆ ಇಲ್ಲಿ ೩೩ ಲಕ್ಷ ರೂಪಾಯಿಗಳವರೆಗೆ ನಷ್ಟವಾಗಿರುವುದರಿಂದ, ಇದಕ್ಕೆ ಸಂಬಂಧಪಟ್ಟ ಐ.ಎ.ಎಸ್. ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡ್ದೀರಿ ?

ಅಧ್ಯಕ್ಷರು.—ತಾವು ಭಾಷಣ ಮಾಡಬೇಡಿ, ಪ್ರಶ್ನೆ ಕೇಳಿ ?

ಶ್ರೀ ಜಿ. ರಾಜುಗೌಡ.—ನನಗೆ ಬೇಕಾಗಿರುವುದು ಈ ಬಗ್ಗೆ ಈ ಸದನದ ಒಂದು ಸಮಿತಿ ನೇಮಕವಾಗಬೇಕು. ಈ ಬಗ್ಗೆ ಅಮರಿಲಾಗ್ರವಾದ ತನಿಖೆಯಾಗಬೇಕು ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು. ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಸಹ ಇದರಲ್ಲಿ ಭಾಗಿಯಾಗಬೇಕಾಗಬಹುದು.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾಗಿರುವ ಸೂಚನೆ ಇರುವುದು 'ಖಾಸಗಿಯವರಿಂದ ನಾಯಿಲ್ಸ್ ದಾರವನ್ನು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯವರು ನೀತಿ ನಿಯಮಗಳನ್ನು ಮೀರಿ ಕೊಂಡಿರುವುದರಿಂದ ನಷ್ಟ ಉಂಟಾಗಿದೆಯೇ ಎಂದು. ಈ ಪ್ರಶ್ನೆಗೆ ಉತ್ತರವಾಗಿ ನಾನು ಇಲ್ಲಿ ಏನು ಹೇಳಿದ್ದೇನೆಂದರೆ : 'ದಾಸ್ತಾನಾದ ದಾರವನ್ನು ಇನ್ನೂ ಪೂರ್ಣವಾಗಿ ಮಾಡಿಲ್ಲವಾದ್ದರಿಂದ ಈ ವ್ಯವಹಾರವಲ್ಲಿ ನಷ್ಟವಾಗಿದೆ ಎಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲ.' ಎಂದು. ಆದರೆ ಅವರು ಈಗ ಪ್ರಸ್ತಾಪ ಮಾಡುತ್ತಿರುವ ವಿಚಾರವೆಂದರೆ...

ಶ್ರೀ ಜಿ. ರಾಜುಗೌಡ.—ಇದನ್ನು ಖರೀದಿಸುವ ಬಗ್ಗೆ ನೀತಿ ನಿಯಮಗಳನ್ನು ಅನುಸರಿಸಿಲ್ಲ.

ಅಧ್ಯಕ್ಷರು.—ಅವರು ಮೊದಲು ತಮ್ಮ ಉತ್ತರ ಮುಗಿಸಲಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ.—ಇಲ್ಲಿ ದಾಸ್ತಾನು ಸಂಪೂರ್ಣವಾಗಿ ಮಾರಾಟವಾಗುವವರೆಗೂ ಲಾಭ ಮತ್ತು ನಷ್ಟವನ್ನು ಲೆಕ್ಕ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ೬೭೨ ಕೆ.ಜಿ. ಗಳಷ್ಟನ್ನು ಲಾಭ-ನಷ್ಟವನ್ನು ನಿರ್ಣಯಿಸುವುದಕ್ಕೆ ಸಾಧ್ಯವಿಲ್ಲ. ಆದರೆ ವಾರ್ಷಿಕ ವ್ಯಾಪಾರದ ಮೊತ್ತದಿಂದ ನಿರ್ಧರಿಸಬಹುದು. ಅವರು ಕೊಂಡುಕೊಂಡಿರತಕ್ಕಂಥ ಬೆಲೆ ಎಷ್ಟು. ಮಾರಿರತಕ್ಕ ಬೆಲೆ ಎಷ್ಟು ಎನ್ನುವುದನ್ನು ಸಂಪೂರ್ಣವಾಗಿ ನಾನು ಕೊಡುತ್ತಾ ಇದ್ದೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ಕೇವಲ ಪತ್ರಿಕೆ ಆಧಾರದ ಮೇಲೆ ಆಪಾದನೆ ಮಾಡಿದ್ದಾರೆ ಎಂದು ನನ್ನ ಊಹೆ. ಹೋಂ ಸೆಕ್ರೆಟರಿಯವರು ಇದರ ಬಗ್ಗೆ ಮಾಹಿತಿ ತರಿಸಿ ವಿಚಾರ ಮಾಡುತ್ತಾ ಇದ್ದಾರೆ. ಯಾರು ತಪ್ಪಿತಸ್ಥರಲ್ಲ, ಸಾರುಕಟ್ಟೆಯಲ್ಲಿ ಕಡಿಮೆ ಬೆಲೆ ಇದ್ದಾಗ ಹೆಚ್ಚು ಬೆಲೆಗೆ ಕೊಂಡಿದ್ದಾರೆ ಎನ್ನುವುದು ಹೋಂ ಸೆಕ್ರೆಟರಿಯವರ ತನಿಖೆಯಿಂದ ವ್ಯಕ್ತವಾಗುತ್ತದೆ. ಖಂಡಿತವಾಗಿಯೂ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಯಾರನ್ನೂ ರಕ್ಷಣೆ ಮಾಡಿಲ್ಲ. ಎಷ್ಟೇ ದೊಡ್ಡ ಅಧಿಕಾರಿಯಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನಲ್ಲಿ ೫೦೦ ಕೆ.ಜಿ. ರೇಷ್ಮೆ ದಾರವನ್ನು ಕೊಂಡುಕೊಳ್ಳಬೇಕಾದರೂ ಅಲ್ಲಿನ ಆಡಳಿತ ವರ್ಗ ಸಭೆ ಸೇರಿ ವಿಲ್ಲರೂ ತೀರ್ಮಾನ ಮಾಡತಕ್ಕ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ ಈ ರೇಷ್ಮೆಯನ್ನು ತೆಗೆದುಕೊಳ್ಳುವಾಗ ಈ ನೀತಿ ನಿಯಮಗಳನ್ನು ಅನುಸರಿಸದೇ ತೆಗೆದುಕೊಂಡಿದ್ದಾರೆ. ನಿಮ್ಮ ಪುಸ್ತಕದಲ್ಲಿ ೨೨ ಕೌಂಟಿನ ನೂಲು ಎಂದು ಇದೆ, ಆದರೆ ಅದು ಇರತಕ್ಕಂಥಾದ್ದು ೧೧ ಕೌಂಟಿನ ನೂಲು. ೧೧ ಕ್ಕಿಂತ ಜಾಸ್ತಿ ಇದ್ದರೆ ನಾನು ಒಪ್ಪುತ್ತೇನೆ. ಇದನ್ನು ಏಕೆ ಕೊಂಡುಕೊಂಡಿರಿ ? ಚನ್ನಪಟ್ಟಣದಲ್ಲಿ ಇದು ಇಲ್ಲಿಲ್ಲವೇ ? ಇದರಲ್ಲಿ ಅವ್ಯವಹಾರ ನಡೆದಿದೆ. ಆದಕೊಸ್ಕರ ಸದನದ ಸಮಿತಿ ನೇಮಿಸಿ. ನೀವು ಏಕೆ ಈ ಆಪಾದನೆಯನ್ನು ಹೊತ್ತುಕೊಳ್ಳುತ್ತೀರಿ. ದೇಶದ ದುಡ್ಡನ್ನು ಪೋಲು ಮಾಡಿದ್ದಾರೆ. ದಯಮಾಡಿ ಸದನದ ಸಮಿತಿಯನ್ನು ನೇಮಿಸಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೆ, ಅನಧಿಕೃತವಾಗಿ ಬಂದಿರತಕ್ಕಂಥ ದೂರಿನ ಬಗ್ಗೆ ಮಾಹಿತಿ ತರಿಸಿ, ಮಾಹಿತಿ ಬಂದ ಮೇಲೆ ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರು ನೇರವಾಗಿ ಇರತಕ್ಕಂಥ ದೂರುಗಳ ಬಗ್ಗೆ ಸರ್ಕಾರಕ್ಕೆ ದೂರು ಕೊಡಲಿ, ಆದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ತಯಾರಿದ್ದೇವೆ. ಅನಧಿಕೃತವಾಗಿ ಪತ್ರಿಕೆಯಲ್ಲಿ ಬಂದಿರತಕ್ಕಂಥ ಆಪಾದನೆ ಮೇಲೆ ಹೋಂ ಸೆಕ್ರೆಟರಿಯವರು ತನಿಖೆ ನಡೆಸುತ್ತಾ ಇದ್ದಾರೆ. ಅಧಿಕೃತವಾಗಿ ಮಾನ್ಯ ಸದಸ್ಯರು ಬಂದು ದೂರು ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೆ, ನಾನು ಅಧಿಕೃತವಾಗಿ ಹೇಳುತ್ತೇನೆ. ಪೇಪರನ್ನು ನಂಬಿಕೊಂಡು ನಾನು ಮಾತನಾಡುತ್ತಾ ಇಲ್ಲ. ನನ್ನ ಹತ್ತಿರ ಅಂಕಿಅಂಶಗಳು ಇವೆ. ನಾನು ಅಧಿಕೃತವಾಗಿ ಹೇಳತಕ್ಕಂಥಾದ್ದು. ಇದರಲ್ಲಿ ಅವ್ಯವಹಾರ ನಡೆದಿದೆ. ಸದಸ್ಯರ ಸಮಿತಿಯನ್ನು ನೇಮಿಸಿ, ದೋಷದಿಂದ ವಿಮುಕ್ತರಾಗಿ,

ಅಧ್ಯಕ್ಷರು.—ಮಾನ್ಯ ಕೃಷ್ಣಾರೆಡ್ಡಿಯವರೆ, ಅವರನ್ನು ಕರೆದು ಕಾಂಪ್ರಮೈಸ್ ಮಾಡಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ.—ಮಾನ್ಯ ಸದಸ್ಯರ ಹತ್ತಿರ ಅಧಿಕೃತವಾಗಿ ಮಾಹಿತಿ ಇದ್ದರೆ ಅದನ್ನು ಸರ್ಕಾರಕ್ಕೆ ಕೊಡಲಿ, ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಮಾನ್ಯ ರಾಜೂಗೌಡರೇ, ನಿಮಗೆ ಮೂರು ಸಾರಿ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಟ್ಟಿದ್ದೇನೆ. ನಾಳೆ ಗವರ್ನರ್ ಅಡ್ರಸ್ ಮೇಲೆ ಚರ್ಚೆ ನಡೆಯುತ್ತದೆ, ಆಗ ಅಂಕಿಅಂಶ ತೆಗೆದು ಕೊಂಡು ಚರ್ಚೆ ಮಾಡಿ.

ಶ್ರೀ ಜೆ. ರಾಜುಗೌಡ.—ಮಾನ್ಯ ಅಧ್ಯಕ್ಷರೆ ನಾನು ಹೇಳುವುದೇನೆಂದರೆ.....

ಅಧ್ಯಕ್ಷರು.—ನೀವು ಮಂತ್ರಿಗಳ ಹತ್ತಿರ ಬಂದು ಮಾತನಾಡಿ.

ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು.—

ಶ್ರೀ ರಾಮಯ್ಯ.

ಶ್ರೀ ಎಂ. ಎಸ್. ಪಾಟೀಲ್ ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.

ಶ್ರೀ ವೇದಾಂತ ಹೆಮ್ಮಿಗೆ.—ನನ್ನ ೩೫೪ ನಿಯಮದ ವಿಷಯಕ್ಕೆ ಉತ್ತರ ಬಂದಿಲ್ಲ.

(೧) ಶೆಟ್ಟಿಕೆರೆ ಹೋಬಳಿ ಅಗಸರಹಳ್ಳಿಯಲ್ಲಿ ಸಾರ್ವಜನಿಕರಿಗಾಗಿ ಇದ್ದ ಓಣಿಯನ್ನು ಒತ್ತುವರಿ ಮಾಡಿರುವುದು

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಮತ್ತು ಸಾರ್ವಜನಿಕ ಓಣಿ ಮೊದಲಾದ ಸ್ಥಳಗಳಲ್ಲಿ ವಾಸಗಿಯೆಂಪರು ಅಕ್ರಮ ಕಟ್ಟಡ ಕಟ್ಟುವುದು, ಸ್ವಾಧೀನಪಡಿಸಿಕೊಳ್ಳುವುದು, ಮೊದಲಾದುವುಗಳನ್ನು ತಡೆದು ರಕ್ಷಿಸಬೇಕಾದುದು ಪಂಚಾಯಿತಿ ಕಾರ್ಯದರ್ಶಿ, ರೆವಿನ್ಯೂ ಇನ್ಸ್‌ಪೆಕ್ಟರ್ ಬಿ.ಡಿ.ಓ. ಮೊದಲಾದ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಶೆಟ್ಟಿಕೆರೆ ಹೋಬಳಿ ಅಗಸರಹಳ್ಳಿ ಗ್ರಾಮದಲ್ಲಿ ಆ ಗ್ರಾಮ ವಾಸಿಗಳಾದ ಮಲ್ಲೇಶಯ್ಯ ಬಿನ್ ಹೆಜ್ಜಪ್ಪ, ಗಂಗಣ್ಣ ಬಿನ್ ಸಿದ್ಧರಾಮಯ್ಯ ಇವರ ಏರಡೂ ಮನೆಗಳ ಮಧ್ಯ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಆ ಗ್ರಾಮದ ಜನ ಮತ್ತು ಈ ಓಣಿಯ ಪಶ್ಚಿಮ ಭಾಗದ ಮನೆಗಳ ಜನ ಈ ಓಣಿಯಲ್ಲಿ ಓಡಾಟ ಮಾಡಬೇಕಾಗಿದೆ. ಇಂತಹ ಸಾರ್ವಜನಿಕರ ಅನುಕೂಲಕ್ಕಾಗಿರುವ ಈ ಓಣಿಯನ್ನು ಈ ಓಣಿಯ ಪೂರ್ವ ಭಾಗದ ವಾಸಿಗಳಾದ ಗಂಗಣ್ಣ ಬಿನ್ ಸಿದ್ಧರಾಮಯ್ಯ ಮತ್ತು ಇವರ ತಮ್ಮಂದಿರಾದ ಶಿವಣ್ಣ ರಾಮಲಿಂಗಯ್ಯ ಮತ್ತು ಸಿದ್ಧಪ್ಪ ಇವರುಗಳು ಈ ಓಣಿಯನ್ನು ಪೂರ್ಣ ಒತ್ತುವರಿ ಮಾಡಿ ತಮ್ಮ ಮನೆಗಳನ್ನು ಉಟಾವಣೆ ಮಾಡಲು ಪ್ರಯತ್ನಿಸಿದಾಗ ಮಲ್ಲೇಶಯ್ಯ ಬಿನ್ ಹೆಜ್ಜಯ್ಯ ಮತ್ತು ಗ್ರಾಮಸ್ಥರು ಪಂಚಾಯಿತಿ ಅನುಮತಿ ಇಲ್ಲದೆ ಅಕ್ರಮವಾಗಿ ಸಾರ್ವಜನಿಕ ಓಣಿಯನ್ನು ಒತ್ತುವರಿ ಮಾಡಿ ಕಟ್ಟಲು ಉದ್ದೇಶಿಸಿರುವ ಕಟ್ಟಡವನ್ನು ನಿಲ್ಲಿಸುವಂತೆ ಸಂಬಂಧಪಟ್ಟ ಪಂಚಾಯ್ತಿ ಕಾರ್ಯದರ್ಶಿ, ರೆವಿನ್ಯೂ ಇನ್ಸ್‌ಪೆಕ್ಟರು, ತಹಶೀಲ್ದಾರ್, ಬಿ.ಡಿ.ಓ. ಅಸಿಸ್ಟೆಂಟ್ ಕಮೀಷನರ್, ತಿಪಟೂರು ಇವರುಗಳಿಗೆ ಅರ್ಜಿಯನ್ನು ಸಲ್ಲಿಸಲಾಗಿ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಪಂಚಾಯಿತಿ ಅನುಮತಿ ಇಲ್ಲದೆ ನೂರಾರು ವರ್ಷಗಳಿಂದ ಸಾರ್ವಜನಿಕರು ಓಡಾಡುತ್ತಿದ್ದು ಈ ಓಣಿಯನ್ನು ಪೂರ್ಣ ಒತ್ತುವರಿ ಮಾಡಿದಾಗ ಅವರುಗಳ ಮೇಲೆ ಕ್ರಮ ತೆಗೆದುಕೊಂಡು ಕಟ್ಟಡ ಕಟ್ಟದಂತೆ ಅಥವಾ ಅಕ್ರಮವಾಗಿ ಅನುಮತಿ ಇಲ್ಲದೆ ಕಟ್ಟಿದ ಕಟ್ಟಡವನ್ನು ಖುಲ್ಲಾ ಮಾಡಿಸಲು ಈ ಅಧಿಕಾರಿಗಳಿಗೆ ಕಾನೂನಿನ ಅಧಿಕಾರವಿಲ್ಲವೆ ? ಈ ಕಾನೂನು ಇದ್ದೂ ಇವರುಗಳು ಯಾವುದೇ ಕ್ರಮ ತೆಗೆದುಕೊಳ್ಳದೇ ಸುಮ್ಮನಿರಲು ಕಾರಣವೇನು ? ಈ ಬಗ್ಗೆ ತುಮಕೂರು ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ ಸದರಿ ಅಕ್ರಮ ಕಟ್ಟಡವನ್ನು ಖುಲ್ಲಾ ಮಾಡಿಸಿ ಓಣಿಯಲ್ಲಿ ಸಾರ್ವಜನಿಕರು ಓಡಾಡಲು ಅನುಕೂಲವಾಗುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶಕೊಡಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.